ಕನ್ನಡಪ್ರಭ
ಗುರುವಾರ 26.02.2026

ಉಚಿತ ಜ್ಯೋತಿಷ್ಯ ಮಾರ್ಗದರ್ಶನ

ಮೈಸೂರು: ನಗರದ ಹೋಟೆಲ್ ಲಿ ರುಚಿಯಲ್ಲಿ ಫೆ. 28 ಮತ್ತು ಮಾ. 1 ರಂದು ಉಚಿತವಾಗಿ ಒಕಲ್ಟ್ ಬಿಲೀವರ್ - ಸೀಸನ್ 4 ಆಯೋಜಿಸಲಾಗಿದೆ. ಮೋನಿಕಾ ಹರಿರಾಮಾಣಿ ಅವರು ಆಯೋಜಿಸಿರುವ ಈ ಕಾರ್ಯಕ್ರಮ ಜ್ಯೋತಿಷ್ಯ ಪ್ರಶಸ್ತಿ ಪ್ರದಾನದ ಅಂಗವಾಗಿ ನಡೆಯಲಿದ್ದು, ಸಾರ್ವಜನಿಕರಿಗೆ ಜ್ಯೋತಿಷ್ಯ ಕುರಿತು ಉಚಿತ ಮಾರ್ಗದರ್ಶನ ಇರಲಿದೆ.

ನನ್ನ, ಶಾಸಕ ಜಿ.ಡಿ.ಹರೀಶ್‌ಗೌಡ ಬಾಂಧವ್ಯ ರಾಜಕಾರಣವನ್ನೂ ಮೀರಿದುದು: ನಿಖಿಲ್

ಜನಸಾಗರ ನೋಡಿ ಚುನಾವಣಾ ಕಾವು ಆರಂಭಗೊಂಡಿದೆ ಎಂದು ಘೋಷಣೆ

• **ಕನ್ನಡಪ್ರಭ ವಾರ್ತೆ** ಹುಣಸೂರು

ನನ್ನ ಮತ್ತು ಶಾಸಕ ಜಿ.ಡಿ.ಹರೀಶ್ ಗೌಡರ ಬಾಂಧವ್ಯ ರಾಜಕಾರಣವನ್ನೂ ಮೀರಿದುದು. ಹರೀಶ್ ಗೌಡರ ನೇತೃತ್ವದಲ್ಲಿ ಹುಣಸೂರಿನಲ್ಲಿ ಪಕ್ಷದ ಈ ಕಾರ್ಯಕ್ರಮ ಅಭೂತಪೂರ್ವವಾಗಿದೆ. ಈ ಜನಸಾಗರ ನೋಡಿದರೆ ಚುನಾವಣಾ ಕಾವು ಹುಣಸೂರಿನಿಂದಲೇಆರಂಭಗೊಂಡಿದೆಎನ್ನಬಹುದು. ಮತದಾರ ಆಳುವ ಸರ್ಕಾರಕ್ಕೆ ಪಾಠ ಕಲಿಸಲು ಸಜ್ಜಾಗಿದ್ದಾನೆ ಎಂದು ಸಂತಸ ವ್ಯಕ್ತಪಡಿಸಿದರು.

ಹುಣಸೂರಿನಲ್ಲೇ ನ್ನ ರಾಜಕಾರಣ- ಹರೀಶ್ ಗೌಡ; 2012ರಲ್ಲಿ ಕಸಬಾ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕನಾಗಿ ಸಹಕಾರಿಯಾಗಿ ಆರಂಭಗೊಂಡ ನನ್ನ ಜೀವನ 2023ರಲ್ಲಿ ಹುಣಸೂರು ಮಹಾಜನತೆಯ ಬೆಂಬಲದಿಂದ ರಾಜಕಾರಣದ ಮೊದಲ ಹೆಜ್ಜೆ ಇಟ್ಟಿದ್ದೇನೆ. ಹುಣಸೂರಿನ ಜನರ ಋಣವನ್ನು ನಾನೆಂದೂ ಮರೆಯಲಾರೆ. ಅಂತೆಯೇ ನನ್ನ ರಾಜಕಾರಣದ ಜೀವನ ನಿಖಿಲ್ ಅವರೊಂದಿಗೆಎಂದಿಗೂಮುಂದುವರೆಯಲಿದ್ದು, ನಾನು ಕೂಡ ಮುಂಬರುವ 2028ರ ಚುನಾವಣೆಯನ್ನೂ ಹುಣಸೂರಿನಿಂದಲೇ ಮುಂದುವರೆಸಲಿದ್ದೇನೆ. ಈ ಜನರ ಋಣವನ್ನು ನಾನೆಂದೂ ಮರೆಯುವುದಿಲ್ಲವೆಂದು ಶಾಸಕ ಜಿ.ಡಿ. ಹರೀಶ್ ಗೌಡ ಹೇಳುವ ಮೂಲಕ ಕಾರ್ಯಕರ್ತರ ಮನದಲ್ಲಿದ್ದ ಕ್ಷೇತ್ರ ಬದಲಾವಣೆಯ ಗೊಂದಲಕ್ಕೆ ಸಂಪೂರ್ಣ ತೆರೆ ಎಳೆದರು.

ಜನವೋ ಜನ... ಸಮಾವೇಶದಲ್ಲಿ ತಾಲೂಕಿ ನಾದ್ಯಂತ 20 ಸಾವಿರಕ್ಕೂ ಅಧಿಕ ಮಂದಿ ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳು ಭಾಗವಹಿಸಿದ್ದರು. ಇಡೀ ಮೈದಾನದಲ್ಲಿ ಮತ್ತು ಮೆರವಣಿಗೆ ಯಲಿ ಜನಸಾಗರವೇ ಕಂಡುಬಂದಿತ್ತು. ಸಮಾವೇಶಕ್ಕೆ ಬಂದ ವರಿಗೆ ರುಚಿಯಾದ ಊಟದ ವ್ಯವಸ್ಥೆ ಮಾಡಲಾಗಿತ್ತು. ಜನ ಕಂಡು ನಾಯಕರು ಫುಲ್ ಖುಷ್ ಆಗಿದ್ದಂತೂ ನಿಜ.

ನೂತನ ಅಧ್ಯಕ್ಷರಾಗಿ ಎಂ.ಬಿ. ಸುರೇಂದ್ರ: ಇದೇ ವೇಳೆ ತಾಲೂಕಿನ ಜೆಡಿಎಸ್ ಘಟಕದ ನೂತನ ಅಧ್ಯಕ್ಷರಾಗಿ ಜಿಪಂ ಮಾಜಿ ಸದಸ್ಯ ಎಂ.ಬಿ. ಸುರೇಂದ್ರ, ನಗರಾಧ್ಯಕ್ಷರಾಗಿ ನಗರ'ಸಭೆ ಮಾಜಿ ಸದಸ್ಯ ಎಸ್. ಶರವಣ ಪಕ್ಷದ ಬಾವುಟ ಸ್ವೀಕರಿಸಿ ಪದಗ್ರಹಣ ಮಾಡಿದರು. ಪಕ್ಷದ ವಿವಿಧ ಹಂತದ ಪದಾಧಿಕಾರಿಗಳನ್ನು ಶಾಸಕ ಜಿ.ಡಿ. ಹರೀಶ್ ಗೌಡ ಘೋಷಿಸಿ ಬಾಕಿ ಉಳಿದಿರುವ ಹುದ್ದೆಗಳನ್ನು ಶೀಘ್ರ ನೇಮಿಸುವುದಾಗಿ ತಿಳಿಸಿದರು.

ಬೈಕ್ ರ‍್ಯಾಲಿ: ಸಾವಿರ ಕಳಶಹೊತ್ತ ಮಹಿಳೆಯರು.. ಜಾನಪದ ಕಲಾತಂಡ.. ತಾಲೂಕಿನ ಬಿಳಿಕೆರೆಯ ಹೊಸಲು ಮಾರಮ್ಮ ದೇಗುಲದ ಆವರಣದಿಂದ ಒಂದು ಸಾವಿರಕ್ಕೂ ಹೆಚ್ಚು ಯುವಕರು ಬೈಕ್ ರ್ಯಾಲಿ ಮೂಲಕ ತಮ್ಮ ನೆಚ್ಚಿನ ನಾಯಕರನ್ನು ಹುಣಸೂರಿಗೆ ಕರೆತಂದರು. ಹುಣಸೂರಿನ ಎಪಿಎಂಸಿ ವೃತ್ತದಲ್ಲಿನ ಅರಸು ಪುತ್ಥಳಿಗೆ ನಿಖಿಲ್ ಕುಮಾರಸ್ವಾಮಿ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ನಂತರ ಆಂಜನೇಯಸ್ವಾಮಿ ದೇವಾಲಯದ ಆವರಣದಿಂದ ಮಂಗಳೂರಿನ ಚಂಡೆವಾದನ, ಹುಲಿವೇಷಧಾರಿಗಳ ಕುಣಿತ, ಕರಗ, ಗಾರುಡಿ ಕುಣಿತ, ಚಿಲಿಪಿಲಿ ಕುಣಿತ, ವೀರಗಾಸೆ ಕುಣಿತ, ಭದ್ರಕಾಳಿ ಕುಣಿತ, ನಂದಿಕಂಬ, ಮಂಗಳವಾದ್ಯ ಸೇರಿದಂತೆ 20ಕ್ಕೂ ಹೆಚ್ಚು ಜಾನಪದ ಕಲಾತಂಡಗಳು, 800ಕ್ಕೂ ಹೆಚ್ಚು ಕಳಶಹೊತ್ತ ಮಹಿಳೆಯರ ದಂಡಿನೊಂದಿಗೆ ಮೆರವಣಿಗೆ ಮುನೇಶ್ವರ ಕಾವಲ್ ಮೈದಾನವನ್ನು ತಲುಪಿತು. ಅರಸು ಪುತ್ಥಳಿ ಬಳಿ ಅಬಿಮಾನಿಗಳು ಕ್ರೇನ್ ಮೂಲಕ ನೆಚ್ಚಿನ ನಾಯಕರಿಗೆ ಮುಸಂಬಿ ಹಣ್ಣಿನ ಬೃಹದಾಕಾರದ ಹಾಕಿ ಸಂಭ್ರಮಿಸಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮಾ.4ರಂದು ದಸಂಸದಿಂದ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಒಳಮೀಸಲಾತಿಯಲ್ಲಿನ ಅವೈಜ್ಞಾನಿಕ ತೀರ್ಮಾನದಿಂದ ನೇಮಕಾತಿಯಲ್ಲಿ ಉಂಟಾಗಿರುವ ಸಮಸ್ಯೆ ಬಗೆಹರಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಮಾ. 4 ರಂದು ಪ್ರತಿಭಟನೆ ನಡೆಸುವುದಾಗಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ತಿಳಿಸಿದೆ.

ಒಳಮೀಸಲಾತಿ ವಿಷಯದಲ್ಲಿ ರಾಜ್ಯ ಸರ್ಕಾರ ನಡೆಸಿರುವ ಅವೈಜ್ಞಾನಿಕ ರೋಸ್ಟರ್‌ಬಿಂದುವಿನಿಂದಾಗಿ ನೇಮಕಾತಿಗಳಲ್ಲಿ ಬಿ ಮತ್ತು ಸಿ ವರ್ಗಗಳಿಗೆ ಅನ್ಯಾಯವಾಗಿದ್ದು, ಕೂಡಲೇ ಸರಿಪಡಿಸಿ ಉಪ ಜಾತಿಗೆ ಸಾಮಾಜಿಕ ನ್ಯಾಯ ಒದಗಿಸಬೇಕು, ಅಲೆಮಾರಿ ಸಮುದಾಯ ಮತ್ತು ಪೌರಕಾರ್ಮಿಕ ವರ್ಗಕ್ಕೆ ಪ್ರತ್ಯೇಕವಾಗಿ ಮೀಸಲತಿ ನಿಗದಿಪಡಿಸಬೇಕು ಎಂದು ಸಮಿತಿಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮಾ.4 ರಂದು ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳ ಕಾರ್ಯಕರ್ತರು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆ ನಡೆಸುತ್ತೇವೆ. ಇನ್ನುಳಿದಂತೆ ರಾಜ್ಯ ಎಲ್ಲಾ ಜಿಲ್ಲೆಕೇಂದ್ರಗಳಲ್ಲಿ ಏಕಕಾಲಕ್ಕೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿ, ಅಲ್ಲಿಯ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ನೀಡುವುದಾಗಿ ಅವರು ಹೇಳಿದರು.

ರಾಜ್ಯದಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಅರ್ಜಿ ಸಲ್ಲಿಸಿರುವ ಭೂ ರಹಿತ ಬಡವರಿಗೆ ಕೂಡಲೇ ಸಾಗುವಳಿ ಪತ್ರ ಹಾಗೂ ಅವಕಾಶ ವಂಚಿತರಿಗೆ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಅವರು ಒತ್ತಾಯಿಸಿದರು.

ಎಸ್.ಸಿ.ಎ.ಪಿ ಹಾಗೂ ಟಿ.ಎಸ್ಪಿ ಹಣವನ್ನು ರಾಜ್ಯ ಸರ್ಕಾರ ದುರುಪಯೋಗಪಡಿಸಿಕೊಂಡಿದ್ದು, 45 ಸಾವಿರ ಕೋಟಿ ರೂ. ಹಣವನ್ನು ಗ್ಯಾರಂಟಿ ಯೋಜನೆ ಇನ್ನಿತರ ಕಾರ್ಯಗಳಿಗೆ ಬಳಕೆ ಮಾಡಿದ್ದು, ಕೂಡಲೇ ಹಿಂದಕ್ಕೆ ನೀಡಬೇಕು. ಯೋಜನೆ ಮೂಲ ಉದ್ದೇಶಕ್ಕೆ ಮಾತ್ರ ಬಳಸುವಂತಾಗಬೇಕಿದ್ದು ಕಾಯ್ದೆದುರುಪಯೋಗವಾದಲ್ಲಿ, ಕ್ರಿಮಿನಲ್ ಮೊಕದ್ದಮೆ ಜರುಗಿಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ರಾಜಶೇಖರ್‌ಕೋಟೆ, ತಳೂರು ಪ್ರಸನ್ನ, ಎಸ್.ಆರ್.ಎಸ್ ಮಂಜು ಇದ್ದರು.

CHANGE OF NAME

I, **HEMANTHA NAIK V S** S/o Shivarayappa, residing at No. 1452/A, 12th Cross, 2nd Stage, Srirampura, Mysuru=570023, have changed my name from **HEMANTHA NAIK V S** to **HEMANTH NAIK V S** vide affidavit sworn before Notary Geetha R, Mysuru, dated 25-02-2026

ಬಹಿರಂಗ ಹರಾಜು

ಮೆ. ಸುನಿತಾ ಪಾನ್ ಬ್ರೋಕರ್ಸ್, ಗಿರವಿದಾರರು, ಮುಖ್ಯ ಬಸ್ ನಿಲ್ದಾಣ, ಕುದೇರು 571 316, ಚಾಮರಾಜನಗರ ತಾಲ್ಲೂಕು & ಜಿಲ್ಲೆ, ಇವರಲ್ಲಿ 1-11-24 ರಿಂದ 15-1-25 ರವರೆಗೆ ಗಿರವಿ ಇಟ್ಟು ಬಿಡಿಸದ ಪದಾರ್ಥಗಳನ್ನು ಕರ್ನಾಟಕ ಗಿರವಿ ಕಾನೂನು 1966ರ ಅಧಿ ನಿಯಮ 20ರನ್ವಯ ದಿನಾಂಕ: 4-3-2026 ರಂದು ಬೆಳಗ್ಗೆ 10 ಗಂಟೆಯಿಂದ ಮೇಲ್ಕಂಡ ಗಿರವಿ ಅಂಗಡಿಯಲ್ಲಿ ಮೆ. ದೀಪಕ್ ಆಕ್ಷನೀಯರ್ಸ್, ಸರ್ಕಾರಿ ಅಂಗೀಕೃತ ಹರಾಜುದಾರರು, 2007/1 ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು-1 ರವರು ಹರಾಜು ಮಾಡುವರು.

ಬಹಿರಂಗ ಹರಾಜು

ಮೆ. ರಾಮ್‌ದೇವ್ ಪಾನ್ ಬ್ರೋಕರ್ಸ್, ಗಿರವಿದಾರರು, ಬಸ್ ನಿಲ್ದಾಣ, ಕಣಗಾಲು 571 187, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ಇವರಲ್ಲಿ 20-10-23 ರಿಂದ 26-12-24 ರವರೆಗೆ ಗಿರವಿ ಇಟ್ಟು ಬಿಡಿಸದ ಪದಾರ್ಥಗಳನ್ನು ಕರ್ನಾಟಕ ಗಿರವಿ ಕಾನೂನು 1966ರ ಅಧಿನಿಯಮ 20ರನ್ವಯ ದಿನಾಂಕ: 9-3-2026 ರಂದು ಬೆಳಗ್ಗೆ 10 ಗಂಟೆಯಿಂದ ಮೇಲ್ಕಂಡ ಗಿರವಿ ಅಂಗಡಿಯಲ್ಲಿ ಮೆ. ದೀಪಕ್ ಆಕ್ಷನೀಯರ್ಸ್, ಸರ್ಕಾರಿ ಅಂಗೀಕೃತ ಹರಾಜುದಾರರು, 2007/1 ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು-1 ರವರು ಹರಾಜು ಮಾಡುವರು.

ಬ್ಯಾಂಕ್ ಆಫ್ ಬರೋಡ

ಪ್ರಾದೇಶಿಕ ಕಛೇರಿ, ಬರೋಡಾ ಸೌಧ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು

ಇ-ಹರಾಜು ಮಾರಾಟ ಸೂಚನೆ "ಅನುಬಂಧ – IV-A [ನಿಯಮ 6(2) & 8 (6)]

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಜಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, " ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ ಸಂ	ಸಾಲಗಾರರ / ಜಾಮೀನುದಾರರ / ಅಡಮಾನುದಾರ ಹೆಸರು & ವಿಳಾಸ	ತಿಳಿದಿರುವ ನಿರ್ಬಂಧಗಳೊಂದಿಗೆ ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ, ಋಣಭಾರಗಳು ಯಾವುದಾದರೂ ಬ್ಯಾಂಕಿಗೆ ತಿಳಿದಿದ್ದಲ್ಲಿ	ಒಟ್ಟು ಬಾಕಿ ಮೊತ್ತ	ಇ-ಹರಾಜಿನ ದಿನಾಂಕ ಮತ್ತು ಸಮಯ	1) ಮೀಸಲು ಬೆಲೆ, 2) ಇಎಂಡಿ, 3) ಬಿಡ್ ಗುಣಾಂಕ ಮೊತ್ತ, 4) ಸ್ವಾಧೀನದ ರೀತಿ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ.
		ಹೆಚ್ ಡಿ ಕೋಟೆ ಶಾಖೆ				
1.	(1) ಶ್ರೀ ಅಬ್ಬಾಸ್ ಆರ್ ಬಿನ್ ರಫೀಕ್ ಪಿ ಎಂ, ಹಿರೇಹಳ್ಳಿ, ಕಾಲೋನಿ, ಹಿರೇಹಳ್ಳಿ ಅಂಚೆ, ಹೆಗ್ಗಡದೇವನಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ-571114.	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ನಂ.342/11, ಯೂನಿಕ್ ನಂ.152200401145022044 ಮತ್ತು 'EXOTICT FARMS' ಎಂದು ಕರೆಯಲ್ಪಡುವ ವಾಸಯೋಗ್ಯ ಉದ್ದೇಶಕ್ಕಾಗಿ ಅಭಿವೃದ್ಧಿಗೊಂಡಿರುವ ಭೂಮಿಯ ಸರ್ವೆ ನಂ.96/6, ಈ ಆಸ್ತಿಯು ಗುಂಗ್ರಾಲ್‌ಛತ್ರ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.14 ಮೀಅರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: (18.32+18.10)/2 ಮೀಟರ್‌ರ್, ಒಟ್ಟು ವಿಸ್ತೀರ್ಣ 166.44 ಚದರ ಮೀಟರ್, ಈ ಆಸ್ತಿಯು ಶ್ರೀ ಅಬ್ಬಾಸ್ ಆರ್ ಬಿನ್ ರಫೀಕ್ ಪಿ ಎಂ ಅವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.10, ಪಶ್ಚಿಮಕ್ಕೆ: ಆಸ್ತಿ ನಂ.12, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ.96/5.	ರೂ. 47,32,189.58 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.	ದಿನಾಂಕ: 18.03.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯವರೆಗೆ	ಮೀಸಲು ಬೆಲೆ : ರೂ. 24,00,000/- ಇಎಂಡಿ ಮೊತ್ತ: ರೂ. 2,40,000/- ಬಿಡ್ ಗುಣಾಂಕದ ಮೊತ್ತ ರೂ.10,000/- 4) ಸಾಂಕೇತಿಕವಾಗಿ	ದಿನಾಂಕ 17.03.2026 ರಂದು ಸಂಜೆ 4.00 ಗಂಟೆಯವರೆಗೆ
2.	(1) ಶ್ರೀ ಹರೀಶ ಕೆ ಟಿ ಬಿನ್ ಶ್ರೀ ತಿಮ್ಮಯ್ಯ, ಕೊತೇಗಾಲ ಗ್ರಾಮ ಅಂಚೆ, ಸರಗೂರು ಹೋಬಳಿ, ಹೆಚ್‌ಡಿ ಕೋಟೆ ತಾಲ್ಲೂಕು, ಮೈಸೂರು-571121. ಜಾಮೀನುದಾರರು: ಶ್ರೀ ಬಸವರಾಜು ಹೆಚ್ ಎಸ್ ಬಿನ್ ಕೆ ಸಿದ್ದ ಬಸವಯ್ಯ, ಹೆಚ್ ಡಿ ಕೋಟೆ ತಾಲ್ಲೂಕು ನುಗು ಬೀರಾವಳಿ ಗ್ರಾಮ, ಬೀರಾವಳಿ, ಮೈಸೂರು-571121. (2) ಶ್ರೀ ತಿಮ್ಮಯ್ಯ ಬಿನ್ ಲೇಟ್ ಚೌಡಯ್ಯ, ಸರಗೂರು ಹೋಬಳಿ, ಹೆಚ್ ಡಿ ಕೋಟೆ ತಾಲ್ಲೂಕು ಕೊತೇಗಾಲ, ಮೈಸೂರು-571121.	ಆಸ್ತಿ ನಂ.1 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಟೌನ್ ಪಂಚಾಯತ್ ಸರಗೂರು, ಖಾಲಿ ನಿವೇಶನದ ಆಸ್ತಿಯ ಫಾರ್ಮ್ ನಂ.3, ಖಾಲಿ ನಿವೇಶನದ ನಂ.1-512-130, ಆಸ್ತಿಯ ವಿಭಾಗದ ನಂ.571/79/426/7, ದಾಖಲೆ ನಂ.1825346. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.144018 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 12.192024 ಮೀಟರ್, ಒಟ್ಟು ವಿಸ್ತೀರ್ಣ 111.4836 ಚದರ ಮೀಟರ್, ಖಾಲಿ ನಿವೇಶನದ ಆಸ್ತಿಯ ವಾರ್ಡ್ ನಂ.1, ವಿವೇಕನಗರ, ಸರಗೂರು ಟೌನ್, ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಶಿವಣ್ಣರವರ ಮನೆ, ಪಶ್ಚಿಮಕ್ಕೆ: ಖಾತೇದಾರ್‌ರವರ ನಿವೇಶನ, ಉತ್ತರಕ್ಕೆ: ಖಾಲಿ ನಿವೇಶನ, ದಕ್ಷಿಣಕ್ಕೆ: ರಸ್ತೆ. ಆಸ್ತಿ ನಂ.2 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಟೌನ್ ಪಂಚಾಯತ್ ಸರಗೂರು, ಖಾಲಿ ನಿವೇಶನದ ಆಸ್ತಿಯ ಫಾರ್ಮ್ ನಂ.3, ಖಾಲಿ ನಿವೇಶನದ ನಂ.1-504-50, ಆಸ್ತಿಯ ವಿಭಾಗದ ನಂ.572/79/426/8, ದಾಖಲೆ ನಂ.1825309. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.144018 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 12.192024 ಮೀಟರ್, ಒಟ್ಟು ವಿಸ್ತೀರ್ಣ 111.4836 ಚದರ ಮೀಟರ್, ಖಾಲಿ ನಿವೇಶನದ ಆಸ್ತಿಯ ವಾರ್ಡ್ ನಂ.1, ವಿವೇಕನಗರ, ಸರಗೂರು ಟೌನ್, ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಖಾತೇದಾರ್‌ರವರ ನಿವೇಶನ, ಪಶ್ಚಿಮಕ್ಕೆ: ಖಾಸಗಿ ನಿವೇಶನ, ಉತ್ತರಕ್ಕೆ: ಖಾಸಗಿ ನಿವೇಶನ, ದಕ್ಷಿಣಕ್ಕೆ: ರಸ್ತೆ. ಆಸ್ತಿ ನಂ.3 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಟೌನ್ ಪಂಚಾಯತ್ ಸರಗೂರು, ಖಾಲಿ ನಿವೇಶನದ ಆಸ್ತಿಯ ಫಾರ್ಮ್ ನಂ.3, ಖಾಲಿ ನಿವೇಶನದ ನಂ.1-512-128ಬಿ, ಆಸ್ತಿಯ ವಿಭಾಗದ ನಂ.574/79/426/10, ದಾಖಲೆ ನಂ.1825336. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.144018 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 12.192024 ಮೀಟರ್, ಒಟ್ಟು ವಿಸ್ತೀರ್ಣ 111.4836 ಚದರ ಮೀಟರ್, ಖಾಲಿ ನಿವೇಶನದ ಆಸ್ತಿಯ ವಾರ್ಡ್ ನಂ.1, ವಿವೇಕನಗರ, ಸರಗೂರು ಟೌನ್, ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ನಿವೇಶನ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಟರಾಜು ರವರ ನಿವೇಶನ, ದಕ್ಷಿಣಕ್ಕೆ: ರಸ್ತೆ. ಆಸ್ತಿ ನಂ.4 : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಟೌನ್ ಪಂಚಾಯತ್ ಸರಗೂರು, ಖಾಲಿ ನಿವೇಶನದ ಆಸ್ತಿಯ ಫಾರ್ಮ್ ನಂ.3, ಖಾಲಿ ನಿವೇಶನದ ನಂ.1-512-128ಎ, ಆಸ್ತಿಯ ವಿಭಾಗದ ನಂ.575/79/426/11, ದಾಖಲೆ ನಂ.1825191. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.144 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: (13.319+14.356)2, ಒಟ್ಟು ವಿಸ್ತೀರ್ಣ 126.533886 ಚದರ ಮೀಟರ್, ಖಾಲಿ ನಿವೇಶ